ಪಕ್ಕಕ್ಕೆ ಸರಿಸಿ ಅವಳು ಟಿಶ್ಯೂ ಪೇಪರಿನ ತಳಕ್ಕೆ ಕೈ ತೂರಿಸಿದಳು. ಅವಳ ಕೈಗಳಿಗೆ ಎಂತಹದ್ದೋ ನವಿರು ನವಿರಾದ ತುಪ್ಪಳದಂತೆ ನುಣುಪಾಗಿರುವ ವಸ್ತುವಿನ ಸ್ಪರ್ಶವಾಯಿತು.

"ಓ ಮೈ ಗಾಡ್!" ಮಿಸೆಸ್ ಬ್ರಿಗ್ಸ್‌ಳ ಬಾಯಿಂದ ಅವಳಿಗರಿವಿಲ್ಲದೆಯೇ ಸಣ್ಣದಾದ ಚೀತ್ಕಾರವೊಂದು ಹೊರಟಿತು. ''ಖಂಡಿತ ಇದು ನಿಜವಾಗಿರಲಾರದು. ತಾನು ಕನಸು ಕಾಣುತ್ತಿಲ್ಲ ತಾನೆ?'' ಮುಚ್ಚಿದ್ದ ಕಣ್ಣುಗಳನ್ನು ಅರಳಿಸುತ್ತಾ ಅವಳು ಒಳಗೆ ಮಿರುಗುತ್ತಿದ್ದ ಮೊಣಕಾಲುದ್ದದ ಕೋಟನ್ನು ನೋಡಿ ತನ್ನನ್ನು ಕೇಳಿಕೊಂಡಳು.

ರಟ್ಟಿನ ಬಾಕ್ಸನ್ನು ಕೆಳಕ್ಕೆ ಬಿಟ್ಟು, ಮಿಸೆಸ್ ಬ್ರಿಗ್ಸ್ ಎರಡೂ ಕೈಗಳಿಂದ ನಿಲುವಂಗಿಯನ್ನು ಮೇಲಕ್ಕೆ ಎತ್ತಿ, ಎದೆಗೆ ಒತ್ತಿ ಹಿಡಿದು ಧ್ಯಾನ ಪರವಶಳಾದಳು. ಸ್ವಲ್ಪ ಹೊತ್ತಿನಲ್ಲೇ ಎಚ್ಚರಗೊಂಡು ನಿಲುವಂಗಿಯನ್ನು ತನ್ನ ಭುಜಗಳ ಎತ್ತರಕ್ಕೆ ಹಿಡಿದಳು. ಅದು ಅವಳ ಮೊಣಕಾಲುಗಳವರೆಗೆ ಬರುತ್ತಿತ್ತು. ಆ ನಿಲುವಂಗಿಯ ಸೌಂದರ್ಯ, ನಾಜೂಕತೆ ನೋಡಿ ಒಂದು ಗಳಿಗೆ ಅವಳ ಉಸಿರೇ ನಿಂತಂತಾಯಿತು.

"ವ್ಹಾಹ್!! ಮಿಂಕ್ ಕೋಟು!!" ಆಕೆ ಉದ್ಗರಿಸಿದಳು. ಇಷ್ಟು ಸುಂದರವಾದ ಮಿಂಕ್ ಕೋಟನ್ನು ಈ ಮೊದಲೆಂದೂ ಅವಳು ನೋಡಿರಲಿಲ್ಲ. (ಮಿಂಕ್ ಕೋಟ್: ಮುಂಗುಸಿಯಂತಿರುವ ಮಿಂಕ್ ಹೆಸರಿನ ಪ್ರಾಣಿಯ ತುಪ್ಪಳದಿಂದ ತಯಾರಿಸಿದ, ಸಾವಿರದಿಂದ ಲಕ್ಷ ಡಾಲರುಗಳಷ್ಟು ಬೆಲೆ ಬಾಳುವ ನಿಲುವಂಗಿ). ಅದು ಅಪ್ಪಟ ಮಿಂಕ್ ಎಂಬುದರಲ್ಲಿ ಯಾವುದೇ ಸಂಶಯವಿರಲಿಲ್ಲ. ಅಪ್ಪಟ ಕಪ್ಪು ಬಣ್ಣ. ಮಿಸೆಸ್ ಬ್ರಿಗ್ಸ್ ಅದನ್ನು ಎತ್ತಿ ಕಿಟಕಿಯ ಬಳಿ ಹಿಡಿದಳು. ಕಡುಕಪ್ಪು ಬಣ್ಣದೊಳಗೆ ಕಡುನೀಲಿಯೂ ಬೆರೆತಂತಿತ್ತು. ಈಗ ಅವಳ ದೃಷ್ಟಿ ನಿಲುವಂಗಿಯ ಲೇಬಲಿನ ಕಡೆಗೆ ಹರಿಯಿತು.

**"Wild Labrador Mink"** ಎಂಬುದನ್ನು ಬಿಟ್ಟರೆ ಬೇರೆ ಏನೂ ಅದರೊಳಗೆ ಕಾಣಿಸಲಿಲ್ಲ. ಬಹುಶಃ ಕರ್ನಲ್ ಸಾಹೇಬರು ಬೇರೆ ಯಾವ ಮಾಹಿತಿಯನ್ನೂ ಉಳಿಸಲು ಇಷ್ಟಪಟ್ಟಿರಲಿಲ್ಲ. ಇದರ ಬೆಲೆ ಏನಿರಬಹುದು? ಸ್ತ್ರೀಸಹಜ ಕುತೂಹಲ ಮಿಸೆಸ್ ಬ್ರಿಗ್ಸ್‌ಳನ್ನು ಕೆಣಕಿತು. ನಾಲ್ಕು, ಐದು, ಆರು ಸಾವಿರ ಡಾಲರ್? ಇಲ್ಲ, ಇನ್ನೂ ಹೆಚ್ಚು? ಅವಳಿಗೆ ಅಂದಾಜಿಸಲು ಆಗಲೇ ಇಲ್ಲ.

ಏನು ಮಾಡಿದರೂ ಆಕೆಗೆ ಕಣ್ಣುಗಳನ್ನು ಆ ಕೋಟಿನಿಂದ ಬೇರೆಡೆಗೆ ತಿರುಗಿಸಲು ಸಾಧ್ಯವಾಗಲಿಲ್ಲ. ಅಷ್ಟೇ ಅಲ್ಲದೆ, ಅದನ್ನೊಮ್ಮೆ ಧರಿಸಿ ಕನ್ನಡಿಯೊಳಗೆ ನೋಡುವವರೆಗೆ ಸಮಾಧಾನವಾಗಲಿಲ್ಲ. ಅವಳು ತಡ ಮಾಡಲಿಲ್ಲ. ಆಕೆ ಧರಿಸಿದ್ದ ಸಾದಾ ಕೆಂಪುಕೋಟನ್ನು ಬೇಗಬೇಗನೆ ಕಳಚಿದಳು. ಉದ್ವೇಗದಿಂದ ಮಿಸೆಸ್ ಬ್ರಿಗ್ಸ್ ಏದುಸಿರು ಬಿಡತೊಡಗಿದಳು. ತನ್ನ ಮೈಮೇಲೆ ಆದ ಆ ನುಣುಪಾದ ಕೋಟಿನ ಸ್ಪರ್ಶ ಮಾತ್ರದಿಂದಲೇ ಮಿಸೆಸ್ ಬ್ರಿಗ್ಸ್ ಕಂಪಿಸತೊಡಗಿದಳು.

ಮಿಂಕ್ ನಿಲುವಂಗಿಯ ಬಾಹುಗಳಿಗೆ ಹೆಣ್ಣು ಮಿಂಕಿನ ಚರ್ಮದ ಲೈನಿಂಗ್ ಮತ್ತು ಉಳಿದೆಡೆ ಗಂಡು ಮಿಂಕಿನ ಚರ್ಮದ ಲೈನಿಂಗನ್ನು ಬಳಸುತ್ತಾರೆಂದು ಮಿಸೆಸ್ ಬ್ರಿಗ್ಸ್ ಕೇಳಿದ್ದಳು.

ಆ ನಿಲುವಂಗಿ ಅವಳಿಗೆಂದೇ ಅಳತೆಮಾಡಿ ಹೊಲಿಸಿದಷ್ಟು ಚೆನ್ನಾಗಿ ಹೊಂದಿಕೊಂಡಿತ್ತು. ಅವಳಿಗಾದ ಆ ಅಪೂರ್ವ ಸಂತೋಷವನ್ನು ವರ್ಣಿಸಲಸಾಧ್ಯ! ಕಾತರದಿಂದ ಮಿಸೆಸ್ ಬ್ರಿಗ್ಸ್ ಕನ್ನಡಿಯ ಮುಂದೆ ನಿಂತಳು. ಅವಳಿಗೆ ತೃಪ್ತಿಯಾಯಿತು. ಆ ಮಿಂಕ್ ನಿಲುವಂಗಿ ಆಕೆಯ ವ್ಯಕ್ತಿತ್ವವನ್ನೇ ಬದಲಾಯಿಸಿಬಿಟ್ಟಿತು. ಸಾದಾ ಕೆಂಪು ಕೋಟು ಧರಿಸಿದ್ದ ಮಧ್ಯಮ ವರ್ಗದ ಮಿಸೆಸ್ ಬ್ರಿಗ್ಸ್ ಮಿಂಕ್ ಕೋಟು ಧರಿಸುತ್ತಿದ್ದಂತೆ ಕುಲೀನ ಮನೆತನದ ಅಪೂರ್ವ ಸುಂದರಿಯಾಗಿ ಮಾರ್ಪಾಟಾಗಿಬಿಟ್ಟಳು!

ಮಿಂಕ್ ಕೋಟು ಕೇವಲ ಒಂದು ದುಬಾರಿ ನಿಲುವಂಗಿಯಷ್ಟೇ ಅಲ್ಲ! ಅದನ್ನು ಮೈ ಮೇಲೆ ಧರಿಸುತ್ತಿದ್ದಂತೆ ಮಿಸೆಸ್ ಬ್ರಿಗ್ಸ್‌ಳ ಜೀವದೊಳಗೆ ಇದುವರೆಗೂ ಅನುಭವಕ್ಕೆ ಬರದ ನಿಗೂಢ ಶಕ್ತಿಯೊಂದು ಹೊರಹರಿಯುತ್ತಿರುವಂತೆ ಭಾಸವಾಯಿತು. ಈ ಕೋಟನ್ನು ಧರಿಸಿ